Regd No BC 155

29-11-1969

ATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು-1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಉದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಗುತ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಮುಂದಿನ ವರ್ಷ ಅಕ್ಟೋಬರಿನಲ್ಲಿ ಪಾಕಿಸ್ತಾನದಲ್ಲಿ ಮಹಾಚುನಾವಣೆ

ಹೊಸ ಮಠಾಧಿಪತಿಗಳು

ಬೆಂಗಳೂರು— ಶ್ರೀ ವಿಶ್ವೇಶ್ವರ ಭಾರತಿ ಸ್ವಾಮಿಗಳವರು ತನ್ನ ಉತ್ತರಾಧಿಕಾರಿಗಳಾಗಿ ಶ್ರೀ ಶಿವಗಂಗಾ ಮಠದ ಶ್ರೀ ಸಚ್ಚಿದಾನಂದ ಅಭಿನವ ಸುಬ್ರಹ್ಮಣ್ಯ ಭಾರತಿ ಸ್ವಾಮಿಗಳವರು ನೇಮಿಸಿದರು — ತಾ॥ 21 ರಂದು ನಡೆದ ಈ ಸಮಾರಂಭಕ್ಕೆ ದೇಶದ ಹಲವು ಕಡೆಯಿಂದ ಶಿಷ್ಯರು ಆಗಮಿಸಿದ್ದರು — ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳವರು ಶ್ರೀ ಮುಖ ಕಳಿಸಿ ಸಮಾರಂಭಕ್ಕೆ ಯಶಸ್ಸು ಕೋರಿದ್ದರು.

★

ಕಾಂಗ್ರೆಸ್ಸಿಗೆ ಒಂದು ಸಂಜೀವಿನಿ ಮಾತ್ರೆ

ಬೆಂಗಳೂರು— ಪ್ರಧಾನಿ ಗುಂಪು ಕಾಂಗ್ರೆಸ್ಸಿಗೆ ಭದ್ರವಾದ ಸಮಾಜವಾದೀ ಕಾರ್ಯಕ್ರಮ ತಯಾರಿಸಿ, ಕಾಂಗ್ರೆಸ್ಸಿನ ಹಿರಿಯ ನಾಯಕರೊಡನೆ ಕುಳಿತು ಈ ಕಾರ್ಯಕ್ರಮ ರೀತ್ಯಾ ಸುಲಭವಾಗಿ ರಾಜಿಗೆ ಬರಬೇಕೆಂದು ಶ್ರೀ ನೀಲಂ ಸಂಜೀವ ಯ್ಯನವರು ಹೇಳಿದರು.

○

ವಿಶ್ವ ಸುಂದರಿ

ಲಂಡ್ನ— ಆಸ್ಟ್ರೇಲಿಯಾದ 20 ವರ್ಷದ ಈವಾ ರುಯಿಬಂ ಸ್ಟೀಯಿರ್ ವಿಶ್ವ ಸುಂದರಿಯಾಗಿ ಕೆರೀಟಧಾರಣೆ ಮಾಡಲ್ಪಟ್ಟಳು — ಇವಳಿಗೆ 2500 ಪೌಂಡು ದೊರೆಯಿತು — ಮಾಡಲಿಂಗ್ ಫೀಲ್ಮು ಮತ್ತಿತರ ವಿಷಯದಲ್ಲಿ 30000 ಪೌಂಡುಗಳು ದೊರೆಯುವ ಅವಕಾಶವಿದೆ.

●

ಸಕ್ಕರೆ ರಫ್ತು

ನವದೆಹಲಿ— ಸರಕಾರ ಈ ವರ್ಷ 3.5 ಲಕ್ಷ ಟನ್ ಸಕ್ಕರೆ ರಫ್ತು ಮಾಡುವ ಸಂಭವವಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಭಾರತಕ್ಕೆ ಬ್ರಿಟನ್ ಸಾಲ

ನವದೆಹಲಿ— 1970 ರಲ್ಲಿ ಬ್ರಿಟನ್ ಭಾರತಕ್ಕೆ ಒಟ್ಟು ರೂ. 68 4 ಕೋಟಿ ಸಾಲಾ ಕೊಡುವ ಬಗ್ಗೆ ರುಜುವಾಯಿತು.

★

ರಾಜಧನ ವಿಷಯದಲ್ಲಿ ಡಿಎಂಕೆ

ಇಂದಿರಾರವರಿಗೆ ಡಿಎಂಕೆ ಬೆಂಬಲ ಅನಿ ಬಂಧನೆಯಲ್ಲವೆಂದು ತಮಿಳುನಾಡು ಮುಖ್ಯಮಂತ್ರಿ ಶ್ರೀ ಕರುಣಾನಿಧಿ ಹೇಳಿದರು. ರಾಜಧನ ಕೊಡಲೇ ರದ್ದಾಗಬೇಕೆಂದೂ ಭೂಮಿ ಮತ್ತು ನಗರಗಳಲ್ಲಿ ಆಸ್ತಿ ಪರಿವರ್ತನೆ ನಿಸ್ಸರ್ಶೆಯಾಗಬೇಕೆಂದೂ ಅವರು ಹೇಳಿದರು.

★

ಎಲ್ಲಕ್ಕೂ ಹಕ್ಕಿದೆ

ನವದೆಹಲಿ— ಪ್ರಧಾನಿ ಕಾಂಗ್ರೆಸ್ಸು ಕಾರ್ಯಕಾರಿ ಸಮಿತಿಗೆ ಶ್ರೀ ಚಂದ್ರಜಿತ್ ಯಾದವ್, ಶ್ರೀ ಗಣೇಶ್, ಶ್ರೀಮತಿ ಸತ್ಪತಿ ರಾಜೀನಾಮೆ ಕೊಟ್ಟಿರುವರು — ಅಧ್ಯಕ್ಷ ಸುಬ್ರಹ್ಮಣ್ಯಂರವರು ಅವನ್ನು ತಿರಸ್ಕರಿಸಿ ರಾಜೀನಾಮೆ ಕೊಡಲು ಎಷ್ಟು ಹಕ್ಕಿದೆ ಅದನ್ನು ತಿರಸ್ಕರಿಸಲೂ ಅಷ್ಟೇ ಹಕ್ಕಿದೆ ಎಂದು ಹೇಳಿದರು.

★

ರಾಜಧನ

ವಿರೋಧ ಕಾಂಗ್ರೆಸ್ ಗುಂಪು ರಾಜಧನ ಸಮಸ್ಯೆ ನ್ಯಾಯಸ್ಥೆಗೆ ಒತ್ತಾಯ ಮಾಡುತ್ತಿದೆ.

ನಿಜಲಿಂಗಪ್ಪನವರ ಕಾಂಗ್ರೆಸ್ಸಿಗೆ ನಿಷ್ಠೆ

ಬೆಂಗಳೂರು— ಪ್ರಧಾನಿ ಕಾಂಗ್ರೆಸ್ ಅಧ್ಯಕ್ಷರಿಂದ ಸಸ್ಪೆಂಡು ಮಾಡಲ್ಪಟ್ಟಿರುವ ಎಂ ಪಿ ಸಿ ಸಿ ಯ ಕಾರ್ಯಕಾರಿ ಸಮಿತಿಯು ಆ ಸಸ್ಪೆಂಷನ್ನನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿತು — ಶ್ರೀ ನಿಜಲಿಂಗಪ್ಪನವರ ಮೂಲ ಕಾಂಗ್ರೆಸ್ಸಿಗೆ ನಿಷ್ಠೆ ಮತ್ತು ಬೆಂಬಲ ನೀಡಲು ನಿರ್ಧರಿಸಿತು.

○

4 ನೇ ಯೋಜನೆಗೆ

ಬೆಂಗಳೂರು— ರಾಜ್ಯದ ಮುಖ್ಯವಾದ 4 ನೇ ಯೋಜನೆಗೆ ರೂ. 350 ಕೋಟಿ ಸುತ್ತಮುತ್ತದಷ್ಟಿದ್ದು, ಅಭಿವೃದ್ಧಿ ಕಾರ್ಯಗಳಿಗೆ ವಿವಿಧ ರಾಷ್ಟ್ರೀಯ ಸಂಸ್ಥೆಗಳಿಂದ ಪಡೆಯಬಹುದಾದ ಸಾಲಾ ಸೇರಿ ರೂ. ಕೋಟಿಗಳಾಗಬಹುದೆಂದು ಹೇಳಲಾಗಿದೆ

★

ರಾಜ್ಯಪಾಲರ ಪ್ರವಾಸ

ಬೆಂಗಳೂರು— ರಾಜ್ಯಪಾಲರು ಶ್ರೀ ಧರ್ಮವೀರ್‌ರವರು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ತಾ॥ 8 ರಿಂದ ಎರಡು ದಿನಗಳು ಪ್ರವಾಸಮಾಡುವರು ; ಮೈಸೂರು ಮಹಾರಾಜರನ್ನೂ ಕಂಡು, ಕೃಷ್ಣರಾಜ ಸಾಗರಕ್ಕೆ ಭೇಟಿಕೊಡುವರು.

ಪಾಕಿಸ್ತಾನದಲ್ಲಿ ಚುನಾವಣೆ

ನವದೆಹಲಿ— ಪಾಕಿಸ್ತಾನದ ಅಧ್ಯಕ್ಷ ಯಹ್ಯಾ ಖಾನರು ತಮ್ಮ ದೇಶದಲ್ಲಿ 1970 ರ ಅಕ್ಟೋಬರು 5 ರಂದು ಸಾರ್ವಜನಿಕ ಚುನಾವಣೆ ನಡೆಸುವದಾಗಿ ರೇಡಿಯೋ ಮೂಲಕ ಸಾರಿರುವರು — ರಾಜಕೀಯ ಪಕ್ಷಗಳು ಜನವರಿ 1 ರಿಂದ ತಮ್ಮ ಚಟುವಟಿಕೆ ನಡೆಸಲು ಅವಕಾಶ ಕೊಡಲಾಗುವುದೆಂದೂ ಹೇಳಿದರು.

★

ಘರ್ಷಣೆಯಲ್ಲಿ ಸಾವು ನೋವು

ಕಲ್ಕತ್ತಾ— ದಕ್ಷಿಣ 24 ಪರಗಣದ ವಿವಿಧ ಭಾಗಗಳಲ್ಲಿ ಸುಗ್ಗಿ ಸಂಬಂಧದಲ್ಲಿ ಆದ ಘರ್ಷಣೆಗಳಲ್ಲಿ 5 ಮಂದಿ ಸತ್ತು 50 ಮಂದಿ ಗಾಯಗೊಂಡರು — ಅಂಟಾಲಾ ಗ್ರಾಮದಲ್ಲಿ ಎರಡು ಗುಂಪಿನ ಜನರಲ್ಲಿ ಹೊಡೆದಾಟವಾಗಿ ಇಬ್ಬರು ಸತ್ತು 26 ಗಾಯಗೊಂಡರು.

★

ಗೂಢಚಾರಿಗಳ ದಸ್ತಗಿರಿ

ನವದೆಹಲಿ— ಕಳೆದ ಮೂರು ವರ್ಷಗಳಲ್ಲಿ ಜಮ್ಮು, ಕಾಶ್ಮೀರ ಮತ್ತು ಅಸ್ಸಾಮಿನಲ್ಲಿ ಗೂಢಚರ್ಯೆ ನಡೆಸಿದ ಆಪಾದನೆಗೆ ಒಬ್ಬ ಚೀನೀಯನೂ 51 ಮಂದಿ ಪಾಕಿಸ್ತಾನಿಗಳೂ ದಸ್ತಗಿರಿ ಮಾಡಲ್ಪಟ್ಟರೆಂದು ಲೋಕಸಭೆಯಲ್ಲಿ ತಿಳಿಸಲಾಯ್ತು.

ಮೈಸೂರು ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಡೈರೆಕ್ಟರುಗಳ ಚುನಾವಣೆ

ನಿಮ್ಮ ಘನವಾದ ಓಟನ್ನು

13

ಡಾ. ಬಿ. ಜಿ. ದಾನ್

ಅವರಿಗೆ ಕೊಡಬೇಕಾಗಿ ವಿನಂತಿ

ತಾ॥ 28-11-69 ನೇ ಶುಕ್ರವಾರದಿಂದ
ಅಮೋಘ ಪ್ರಾರಂಭ ಪ್ರತಿದಿನ 3 ಪ್ರದರ್ಶನಗಳು
ಒಲಂಪಿಯಾ ಚಿತ್ರಮಂದಿರದಲ್ಲಿ
ದಿನ 2-45, 6-15 ಮತ್ತು 9-45 ಕ್ಕೆ ಜಾಯ್ ಫಿಲ್ಮ್ಸ್‌ರವರ
ಅತ್ಯುತ್ತಮ ಪೌರಾಣಿಕ ಸಂಗೀತ ಭರಿತ ವರ್ಣರಂಜಿತ ಚಿತ್ರ
ಬಲರಾಮ್ ಶ್ರೀ ಕೃಷ್ಣ
(ಹಿಂದಿ)
ಪಾತ್ರ:- ಪೃಥ್ವಿರಾಜ್ ಕಪೂರ್ . ದಾರಾಸಿಂಗ್, ಸಾವಿತ್ರಿ, ಜೆಮಿನಿಗಣೇಶ್, ಆಜಾದ್ ಇನ್ನೂ ಮುಂತಾದವರು
ನಿರ್ದೇಶನ: ಚಂದ್ರಕಾಂತ್ ಸಂಗೀತ: ಸಿ. ರಾಮಚಂದ್ರ

ತನ್ನ ಮರಣಾನಂತರ ಜನರ ಊಟಕ್ಕೆ ಕುಡಿತಕ್ಕೆ ಡಾಕ್ಟರಿನ ಡೊನೇರ್ಷ

ಬ್ಲಿನಾರ್ವ್ (ಮಾನ್ಟ್ಗಸ್ಮೈರ್)— ಒಳ್ಳೆ ಧನವಂತ ಬ್ರಿಟಿಷ್ ಡಾಕ್ಟರು ಸಾರ್ಬಿಸ್, ತನ್ನ ಮರಣಾನಂತರ, ತನ್ನ ಸ್ಮರಣಾರ್ಥ 15000 ಸ್ಟರ್ಲಿಂಗನ್ನು ಊಟಕ್ಕೆ, ಕುಡಿತಕ್ಕೆ ಉಪಯೋಗಿಸಲು ತಾವು ಕೊಡುವುದಾಗಿ ಸ್ಥಳೀಯ ಪುರಸಾಧ್ಯಕ್ಷರಿಗೆ ತಿಳಿಸಿದ್ದಾರೆ – ಅನುಪಯುಕ್ತ ಸ್ಮಾರಕ ನಿರ್ಮಾಣಕ್ಕಿಂತ ಈ ರೀತಿಯಲ್ಲಿ ತಮ್ಮ ಹಣ ಖರ್ಚಾಗುವುದು ಉತ್ತಮವೆಂದಿರುವರು.

ದೇವಾಲಯದಲ್ಲಿ ಪುರಾತನ ವಸ್ತು ಕಳವು

ಕೈರೋ— ಎಡ್ಫುವಿನ ಹೊರ್ ಮಾ ಹೆಚ್ ದೇವಾಲಯದ ಗೋಡೆಗಳಲ್ಲಿನ 3300 ವರ್ಷಗಳ ಹಿಂದಿನ ಬಣ್ಣ ಬಳಿದಿದ್ದ ಕಲ್ಲು ಉಂಡೆಗಳು ಕಳುವಾಗಿರುವುದಾಗಿ ವರದಿಯಾಗಿದೆ

ಈರುಳ್ಳಿ ಮಹಿಮೆ

ನವದೆಹಲಿ— ಈರುಳ್ಳಿಯು ಹೃದಯ ರೋಗಗಳಲ್ಲಿ ಪರಿಣಾಮಕಾರಿಯಾಗಿರುವುದೆಂದೂ, ಅದರ ರಸವು ಕ್ಷಯ ರೋಗವನ್ನು ಹತೋಟಿಗೆ ತರಲು ಸಹಾಯಕವಾಗಿರುವುದೆಂದೂ ಬ್ರಿಟಿಷ್ ಮತ್ತು ಇಟಲಿ ಡಾಕ್ಟರುಗಳ ಸಂಶೋಧನೆ ವ್ಯಕ್ತಪಡಿಸಿದೆ.

ಭಾರತದ ಧ್ವಜವೂ ಸೇರಿದೆ

ಚಂದ್ರನಲ್ಲಿಗೆ ಭೇಟಿ ಇತ್ತ ಅಪೊಲೊ 12 ರಲ್ಲಿ ತೆಗೆದುಕೊಂಡು ಹೋಗಲಾದ 136 ದೇಶಗಳ ಧ್ವಜಗಳಲ್ಲಿ ಭಾರತೂ ತ್ರಿವರ್ಣ ಧ್ವಜವೂ ಒಂದು.

ಗೋರಕ್ಷಣೆಗೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು.

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.

3. ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂ

SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಪಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ಸ್

ಜಯಪ್ರದ 2ನೇ ವಾರ

ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮ್ಯಾನ್ ಕಲರ್ —

ಹಮ್ ಸಾಯ

ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್

ಸಂಗೀತ : ಓ. ಪಿ. ನಯ್ಯರ್

[ವಿಶೇಷ ಸ್ವರಮೇಳನಗಳು]

ಆಪೆರಾ

21-11-69 ರಿಂದ

.... ಅತ್ಯಮೋಘ ತಮಿಳು ಚಿತ್ರ ....

ದೇವಮಗನ್

ಪಾತ್ರ ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ

ದಿನ 3 ಆಟಗಳು

Help The Gorakshana

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protectthe Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore